

ಮಾತ್ರ ಮಾಯ!

ದಶಕದ ಹಿಂದೆ ಇರಬಹುದು. ರಾಮಗೊಂಡನ ಮಿತ್ರನೊಬ್ಬ ರಸ್ತೆ ಅಪಘಾತದಲ್ಲಿ ತನ್ನ ಮಡದಿ, ಇಬ್ಬರು ಹೆಣ್ಣುಮಕ್ಕಳನ್ನು ಕಳೆದು ಕೊಂಡಿದ್ದ. ಆತನ ದುಃಖ, ಎದೆಯ ಬೇನೆ ಎಂಥದ್ದಿರಬಹುದು? ಹೇಗೆ ಸಮಾಧಾನ ತಂದುಕೊಂಡಿರಬಹುದು? ಅವನ ಕಡು ದುಃಖ ಈಗ ಮನವರಿಕೆ ಆಗುತ್ತಿದೆ. ಆಗೇನೋ ಸಾಂತ್ವನದ ನಾಲ್ಕು ಮಾತು ಹೇಳಿಯಾಗಿತ್ತು. ವರ್ತಮಾನದಲ್ಲಿ ಆತ ಸಹಜ ಬದುಕಿಗೆ ಮರಳಿದ್ದಾನೆ ಕೂಡ. ಸಾವಿನ ಗಾಯ ಮಾಗಿದೆ. ಮನದೊಳಗೆ ನೋವಿನ ಕಲೆ ಉಳಿದಿರಬಹುದು. ಈಗ ತಾನು ಅವನನ್ನು ಮಾತಾಡಿಸಬೇಕು. 'ಪುತ್ರಿ ಶೋಕವನ್ನು ಅದು ಹೇಗೆ ಭರಿಸಿದೆ ?' ಎಂದು ಕೇಳಬೇಕು. ಅದನ್ನರಿತು ತಾನೂ ಸಿದ್ಧಗೊಳ್ಳಬೇಕೆಂದು ರಾಮಗೊಂಡ ಆಲೋಚಿಸಿದ. 'ಅದು ಹೇಗೆ ನಿನಗೆ ನೀ ಸಮಾಧಾನ ಹೇಳಿಕೊಳ್ತಿಯೋ ಗೆಳೆಯಾ?' ಎಂದು ಕೇಳಿ ತನಗೆ ತಾನು ಸಾಂತ್ವನ ಪಡೆಯುವ ಯೋಚನೆ ಮಾಡಿದ.

ಸವಿತಾಳ ಗಂಭೀರ ಕಾಮಾಲೆ ರೋಗದ ವಿಷಯ ಆಕೆಯ ಗೆಳತಿಯರಿಗೆ ಗೊತ್ತಾಯಿತು. ಅವರ ತಾಯಂದಿರು ಮನೆಗೆ ಬರತೊಡಗಿದರು. ಸುನೀತಾ ಆಸ್ಪತ್ರೆಯಲ್ಲಿರುತ್ತಿದ್ದಳು. ವಿಶ್ರಾಂತಿಗೆಂದು ಬಂದ ರಾಮಗೊಂಡ ಒಬ್ಬನೇ ಮನೆಯಲ್ಲಿ. ಒಬ್ಬಳು, 'ನೋಡ್ರಿ ನಮ್ಮ ಮಾಮಾರಿಗೆ ಲಿವರ್ ಟ್ರಾನ್ಸಪ್ಲಾಂಟ್ ಮಾಡೇವಿ... ಭಾಳಾ ಖರ್ಚ ಬಂತು... ಅದಲ್ಲದ ಸಾಯೋತನಕ ಔಷಧ ನಿಲ್ಲೋದಿಲ್ಲ ನೋಡ್ರಿ ಹಂ ಮತ್ತ!...' ಅಂತಂದರೆ ಇನ್ನೊಬ್ಬಳು, 'ಈಗಿಂದಲೇ ಬುಕ್ ಮಾಡಿ ಇಡಬೇಕರಿ! ಎಮರ್ಜನ್ಸಿ ಸಿಗೋದಿಲ್ಲ...' ಹೀಗೆ ತರ ತರದ ಪುಕ್ಕಟೆ ಮನಸ್ಸನ್ನು ಹಿಂಸಿಸುವ ಸಲಹೆಗಳು. ಇವು ಸಂತೋಷ ನೀಡುವ ನುಡಿಗಳಲ್ಲ. ಹಾಗು ಕೇಳಿಸಿಕೊಂಡಿರಲು ರಾಮಗೊಂಡನಿಗೆ ಸಾಧ್ಯವೂ ಆಗುತ್ತಿರಲಿಲ್ಲ. ಅವ್ಯಕ್ತ ನೋವು ಭಾಸವಾಗುತ್ತಿತ್ತು.

ಡಾ.ಸಂಕೇಶ್ವರ ಅವರ ಟ್ರೀಟ್‌ಮೆಂಟ್ ಚೆನ್ನಾಗಿಯೇ ಆರಂಭಗೊಂಡಿತ್ತು. ನಿತ್ಯ ಎರಡು ಬಾರಿ ರೌಂಡ್‌ಗೆ ಬರುತ್ತಿದ್ದರು. ಸವಿತಾ ಸಂಕೇಶ್ವರರಿಗೆ ಪೂರ್ತಿ ಫೆಮಿಲಿಯರ್ ಆಗಿದ್ದಳು. ನಗುನಗುತ್ತಲೇ ತನ್ನ ಆರೋಗ್ಯ ವಿಚಾರ ಹೇಳುತ್ತಿದ್ದಳು. 'ಹೊಟ್ಯಾಗಿನ ನೀರಿನ ತ್ರಾಸ ಮಾಡಾಕ ಹತ್ತೇತ್ರಿ' ಅಂದಾಗ 'ಏನೂ ಕಾಳಜಿ ಮಾಡಬ್ಯಾಡ. ಹಂಗ ಭಾಳಾ ತ್ರಾಸ ಮಾಡಾಕ ಹತ್ತಿದರ ತಗೆಸಿ ಬಿಡೋಣು... ನೀ ಈಗ ಛಲೋತ್ನಂಗ ಹೊಟ್ಟೆ ತುಂಬಾ ಎಲ್ಲಾ ಥರದ ಊಟ ಮಾಡು... ತಾಕತ್ತು ಬರಬೇಕಲ್ಲ!...' ಎಂದು ಹುರಿದುಂಬಿಸಿ ಹೋಗುತ್ತಿದ್ದರು. ದಿನಾಲು ಕುದಿಸಿದ ಮೊಟ್ಟೆಗಳನ್ನು, ಹಾಲಿನ ಸಿಹಿ ಪದಾರ್ಥಗಳನ್ನು ರಾಮಗೊಂಡ ತಂದು ಕೊಡುತ್ತಿದ್ದ. ತಪ್ಪಿಸುತ್ತಿರಲಿಲ್ಲ. ಮೆಸ್ ನಡೆಸುವವರ ಕಡೆಯಿಂದ ಮಸಾಲೆ ರಹಿತ ಚಿಕನ್ ಊಟ. ಉಣಿಸುವ ಒಂದು ವೇಳಾಪಟ್ಟಿಯನ್ನೇ ಸಿದ್ಧಪಡಿಸಿದ್ದ. ಒಂದು ಸಕಾರಾತ್ಮಕತೆ ಅಂಶ ಏನೆಂದರೆ ಸವಿತಾಳ ಹಸಿವು ಮಾತ್ರ ಕಡಿಮೆಯಾಗಿರಲಿಲ್ಲ. ಆರಂಭದಿಂದಲೂ ಹಸಿವು